# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿರಿಯ ನಾಗರಿಕರಿಗೆ ವಿವಿಧ ಸಾಧನ ಸಲಕರಣೆ ವಿತರಣೆ ಮಾಡುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಏಕಕಡತ ಸಂಖ್ಯೆ: ವಿಹಿನಾಸಇ/ಹಿ.4/002/ಹಿನಾಸಾಸ/2017-18.

**ಪ್ರಸ್ತಾವನೆ:**

2017-18ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ: 158 (3)ನೇ ಬಿಂದುವಿನಲ್ಲಿ 20,000 ಹಿರಿಯ ನಾಗರಿಕರಿಗೆ ವಿವಿಧ ಸಾಧನ ಉಪಕರಣಗಳನ್ನು ವಿತರಿಸಲಾಗುವುದೆಂದು ಘೋಷಿಸಲಾಗಿದೆ. ಹಿರಿಯ ನಾಗರಿಕರು ವಯೋಸಹಜವಾಗಿ ನಿಶಕ್ತಿಯಿಂದ ಬಳಲುತ್ತಿದ್ದು, ಇವರು ತಮ್ಮ ಜೀವನ ಸಂಧ್ಯಾಕಾಲದಲ್ಲಿ ಬೇರೊಬ್ಬರ ಸಹಾಯವಿಲ್ಲದೆ ಸ್ವತಂತ್ರ್ಯವಾಗಿ ಬದುಕುವ ಸಲುವಾಗಿ ಸಾಧನ ಸಲಕರಣೆ ಯೋಜನೆಯನ್ನು ಜಾರಿಗೆ ತರಲಾಗಿದೆ. 2011ರ ಜನಗಣತಿಯನುಸಾರ ರಾಜ್ಯದ ಒಟ್ಟು ಜನಸಂಖ್ಯೆ 6.11 ಕೋಟಿಗಳಲ್ಲಿ ಶೇ.7.72ರಷ್ಟು ಅಂದರೆ 47.19 ಲಕ್ಷ ಹಿರಿಯ ನಾಗರಿಕರಿದ್ದು, ಭಾರತೀಯ ರಿಜರ್ವ್‌ಬ್ಯಾಂಕ್ ತನ್ನ 2013ರ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಿರುವ ವಾರ್ಷಿಕ ನಿರ್ವಹಣಾ ವರದಿಯಲ್ಲಿ ಕರ್ನಾಟಕದಲ್ಲಿ ಶೇ.20.91ರಷ್ಟು ಜನಸಂಖ್ಯೆ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದು ಇವರಲ್ಲಿ 9.87ಲಕ್ಷ ಹಿರಿಯ ನಾಗರಿಕರಿರುವ ಬಗ್ಗೆ ತಿಳಿಸಿ, ಈ ಯೋಜನೆಯಡಿ ಹಿರಿಯ ನಾಗರಿಕರಿಗೆ ಅವರ ಅವಶ್ಯಕತೆಗೆ ಅನುಸಾರವಾಗಿ ಕನ್ನಡಕ, ಅಡ್ಜಸ್ಟಬಲ್ ವಾಕಿಂಗ್ ಸ್ಟಿಕ್/ಟ್ರೈಪಾಡ್, ಶ್ರವಣ ಸಾಧನ, ವಾಕರ್, ಕಮೋಡ್‌ಗಳನ್ನು ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ 20,000 ಫಲಾನುಭವಿಗಳಿಗೆ ಸಲಕರಣೆಗಳನ್ನು ರೂ.506.58 ಲಕ್ಷಗಳಲ್ಲಿ ವಿತರಿಸಲಾಗುವುದೆಂದು ತಿಳಿಸುತ್ತಾ ಯೋಜನೆಯ ರೂಪುರೇಷೆ ಹಾಗೂ ಮಾರ್ಗಸೂಚಿಯನ್ನು ರೂಪಿಸಿ, ತಡೆಪಟ್ಟಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ಯೋಜನೆಯನ್ನು 2017-18ನೇ ಸಾಲಿಗೆ ಅನುಷ್ಠಾನಗೊಳಿಸಲು ರೂ. 506.58 ಲಕ್ಷಗಳ ಆಯವ್ಯಯದ ಅವಶ್ಯಕತೆಯಿದ್ದು, ಸದರಿ ಆಯವ್ಯಯವನ್ನು ಲೆಕ್ಕ ಶೀರ್ಷಿಕೆ:2235-02-104-2-04 ಯೋಜನೆ ಉಪ ಲೆಕ್ಕ ಶೀರ್ಷಿಕೆ-103, 422, 423 ಸಾಮಾನ್ಯ ವೆಚ್ಚಗಳಡಿ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಏಕಕಡತದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 92 ಪಿಹೆಚ್‌ಪಿ 2017, ಬೆಂಗಳೂರು, ದಿನಾಂಕ:09.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ: 158 (3)ನೇ ಬಿಂದುವಿನಲ್ಲಿ 20,000 ಹಿರಿಯ ನಾಗರಿಕರಿಗೆ ವಿವಿಧ ಸಾಧನ ಉಪಕರಣಗಳನ್ನು ವಿತರಿಸಲಾಗುವುದೆಂದು ಘೋಷಿಸಿರುವಂತೆ, ಬಡತನ ರೇಖೆಗಿಂತ ಕೆಳಗಿರುವ 20,000 ಹಿರಿಯ ನಾಗರಿಕರಿಗೆ ಅವಶ್ಯಕತೆಗೆ ಅನುಸಾರವಾಗಿ ಕನ್ನಡಕ, ಅಡ್ಜಸ್ಟಬಲ್ ವಾಕಿಂಗ್ ಸ್ಟಿಕ್/ಟ್ರೈಪಾಡ್, ಶ್ರವಣ ಸಾಧನ, ವಾಕರ್, ಕಮೋಡ್ ನೀಡುವ ಯೋಜನೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಆದೇಶದೊಂದಿಗಿನ ಅನುಬಂಧದಲ್ಲಿ ಲಗತ್ತಿಸಿರುವ ಅರ್ಜಿ ನಮೂನೆ ಹಾಗೂ ಯೋಜನಾ ಮಾರ್ಗಸೂಚಿಗಳಿಗೊಳಪಟ್ಟು ನಿಯಮಾನುಸಾರ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

..2

ಈ ವೆಚ್ಚವನ್ನು 2017-18ನೇ ಸಾಲಿನ ಲೆಕ್ಕ ಶೀರ್ಷಿಕೆ: 2235-02-104-2-04 ಯೋಜನೆ ಉಪ ಲೆಕ್ಕಶೀರ್ಷಿಕೆ-103, 422-ಪರಿಶಿಷ್ಟ ಜಾತಿ ಉಪಯೋಜನೆ, 423-ಗಿರಿಜನ ಉಪಯೋಜನೆ ಸಾಮಾನ್ಯ ವೆಚ್ಚಗಳಡಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 223 ವೆಚ್ಚ-10/2017, ದಿ:22.04.2017 ಮತ್ತು ಪಿಡಿ 71 ಐಎಂಎಂ 2017, ದಿ:27.04.2017ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

9/5/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
6. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ, ಅಭಯ ಸಂಕೀರ್ಣ, 2ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(2&10), ವಿಧಾನ ಸೌಧ, ಬೆಂಗಳೂರು
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
12. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಮಮಇ 92 ಪಿಹೆಚ್‌ಪಿ 2017, ದಿನಾಂಕ 09-05-2017ಕ್ಕೆ ಅನುಬಂಧ
(ಮಾರ್ಗಸೂಚಿ, ಅರ್ಜಿ ಹಾಗೂ ಪ್ರಮಾಣ ಪತ್ರದ ನಮೂನೆಗಳು)

## ಬಡತನ ರೇಖೆಗಿಂತ ಕೆಳಗಿರುವ 20000 ಹಿರಿಯ ನಾಗರಿಕರಿಗೆ ಸಾಧನ ಸಲಕರಣೆ ವಿತರಣೆಯ ಯೋಜನಾ ಮಾರ್ಗಸೂಚಿ

ಹಿರಿಯ ನಾಗರಿಕರು ವಯೋಸಹಜವಾಗಿ ನಿಶಕ್ತಿಯಿಂದ ಬಳಲುತ್ತಿದ್ದು, ಇವರು ತಮ್ಮ ಜೀವನ ಸಂಧ್ಯಾಕಿರಣವನ್ನು ಬೇರೊಬ್ಬರ ಸಹಾಯವಿಲ್ಲದೆ, ತೃಪ್ತಿದಾಯಕವಾಗಿ ಸ್ವತಂತ್ರವಾಗಿ ಬದುಕುವ ಸಲುವಾಗಿ ಸಾಧನ ಸಲಕರಣೆ ಯೋಜನೆಯನ್ನು ಜಾರಿಗೆ ತರಲಾಗಿದೆ.

2011ರ ಜನಗಣತಿಯನುಸಾರ ರಾಜ್ಯದ ಒಟ್ಟು ಜನಸಂಖ್ಯೆ 6.11 ಕೋಟಿಗಳಲ್ಲಿ ಶೇ.7.72ರಷ್ಟು ಅಂದರೆ 47.19 ಲಕ್ಷ ಹಿರಿಯ ನಾಗರಿಕರಿದ್ದಾರೆ. ಭಾರತೀಯ ರಿಜರ್ವ್‌ಬ್ಯಾಂಕ್ ತನ್ನ 2013ರ ಸೆಪ್ಟಂಬರ್‌ನಲ್ಲಿ ಪ್ರಕಟಿಸಿರುವ ವಾರ್ಷಿಕ ನಿರ್ವಹಣಾ ವರದಿಯಲ್ಲಿ ಕರ್ನಾಟಕದಲ್ಲಿ ಶೇ.20.91ರಷ್ಟು ಜನಸಂಖ್ಯೆ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದು ಇವರಲ್ಲಿ 9.87ಲಕ್ಷ ಹಿರಿಯ ನಾಗರಿಕರಿದ್ದಾರೆ.

ಈ ಯೋಜನೆಯಡಿ ಹಿರಿಯ ನಾಗರಿಕರಿಗೆ ಅವರ ಅವಶ್ಯಕತೆಗೆ ಅನುಸಾರವಾಗಿ ಕನ್ನಡಕ, ಅಡ್ಜಸ್ಟಬಲ್ ವಾಕಿಂಗ್ ಸ್ಟಿಕ್ / ಟ್ರೈಪಾಡ್, ಶ್ರವಣ ಸಾಧನ, ವಾಕರ್, ಕಮೋಡ್ ಹೀಗೆ ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ 20000 ಫಲಾನುಭವಿಗಳಿಗೆ ಸಲಕರಣೆಗಳನ್ನು ವಿತರಿಸಲಾಗುವುದು. ವಿವರ ಕೆಳಕಂಡಂತಿದೆ.

| ಸಾಧನ ಸಲಕರಣೆ | ಹಿ.ನಾ.ಸಂಖ್ಯೆ | ಯೂನಿಟ್ ದರ | ಮೊತ್ತ |
|---|---|---|---|
| ಕನ್ನಡಕ | 7020 | 1500 | 10530000 |
| ಅಡ್ಜಸ್ಟಬಲ್ ವಾಕಿಂಗ್ ಸ್ಟಿಕ್ / ಟ್ರೈಪಾಡ್ | 7040 | 1200 | 8448000 |
| ಶ್ರವಣ ಸಾಧನ | 1980 | 10000 | 19800000 |
| ವಾಕರ್ | 1980 | 3000 | 5940000 |
| ಕಮೋಡ್ | 1980 | 3000 | 5940000 |
| **ಒಟ್ಟು** | **20000** | | **5,06,58,000** |

ಸಾಧನ ಸಲಕರಣೆಗಳನ್ನು ಇಲಾಖೆಯು ಇ-ಟೆಂಡರ್ ಮೂಲಕ ಆಯ್ಕೆಯಾದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರಕ್ಕೆ ಒಳಪಟ್ಟ ಸಂಸ್ಥೆಗಳಿಂದ ಖರೀದಿಸಲಾಗುವುದು.

### ಸಾಧನ ಸಲಕರಣೆಗಳನ್ನು ಮಂಜೂರಾತಿ ಮಾಡಲು ಆಯ್ಕೆ ಸಮಿತಿ:

ಜಿಲ್ಲಾ ಮಟ್ಟದ ಸಮಿತಿಯು ನೇಮಿಸುವ ಉಪಸಮಿತಿಯಲ್ಲಿ ಸಾಧನ ಸಲಕರಣೆ ಕೋರಿ ಬಂದ ಅರ್ಜಿಗಳನ್ನು ಜಿಲ್ಲಾ ಕಛೇರಿಗೆ ಸ್ವೀಕರಿಸಿದ ಜೇಷ್ಠತೆಯ ಆದ್ಯತೆಯ ಮೇರೆಗೆ ಮಂಡಿಸಿ, ಅನುಮೋದನೆ ಪಡೆದು ವಿತರಿಸುವುದು. ಉಪಸಮಿತಿಯ ವಿವರ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಪದನಾಮ |
|---|---|---|
| 01 | ಆಯಾ ಜಿಲ್ಲೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರು | ಅಧ್ಯಕ್ಷರು |
| 02 | ಸಂಬಂಧಿಸಿದ ನುರಿತ ತಜ್ಞ ವೈದ್ಯರು | ಸದಸ್ಯರು |
| 03 | ಆಯಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | ಸದಸ್ಯರು |
| 04 | ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಅಂಗವಿಕಲರ ಕಲ್ಯಾಣ ಇಲಾಖೆ, | ಸದಸ್ಯ ಕಾರ್ಯದರ್ಶಿಗಳು. |

ಸಂಖ್ಯೆ 379
ದಿನಾಂಕ: 6/6/17

..2

**ಸಾಧನ ಸಲಕರಣೆಗಳನ್ನು ಪಡೆಯಲು ಅರ್ಜಿಯೊಂದಿಗೆ ಹಿರಿಯ ನಾಗರಿಕರು ಸಲ್ಲಿಸಬೇಕಾದ ದಾಖಲೆಗಳು:**

- ಹಿರಿಯ ನಾಗರಿಕರು ಬಡತನ ರೇಖೆಗಿಂತ ಕೆಳಗಿರಬೇಕು. (ಪ್ರಮಾಣ ಪತ್ರ ಲಗತ್ತಿಸುವುದು)
- ಹಿರಿಯ ನಾಗರಿಕರು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.
- ಅರ್ಜಿ ಸಲ್ಲಿಸುವ ಜಿಲ್ಲೆಯಲ್ಲಿ ಕನಿಷ್ಠ 10 ವರ್ಷಗಳಿಂದ ಜೀವಿಸುತ್ತಿರಬೇಕು. ಸಂಬಂಧಿತ ಪ್ರಾಧಿಕಾರದಿಂದ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸುವುದು.
- ಹಿರಿಯ ನಾಗರಿಕರಿಗೆ ಅಗತ್ಯವಾದ ಸಾಧನ ಸಲಕರಣೆ ಬೇಕು ಎಂಬುದರ ಬಗ್ಗೆ ಸರ್ಕಾರಿ / ಖಾಸಗಿ ಡಾಕ್ಟರ್‌ರವರಿಂದ ನಿಗಿದತ ಅರ್ಜಿ ನಮೂನೆಯ ಮೂಲ ಅರ್ಹತಾ ಪ್ರಮಾಣ ಪತ್ರವನ್ನು ಒದಗಿಸುವುದು.

**ಅರ್ಜಿ ಸಲ್ಲಿಸುವ, ಫಲಾನುಭವಿಗಳ ಆಯ್ಕೆ ಹಾಗೂ ಸಾಧನ ಸಲಕರಣೆ ವಿತರಣೆ ವಿಧಾನ:**

- ಹಿರಿಯ ನಾಗರಿಕರು ಸಾಧನ ಸಲಕರಣೆ ಅರ್ಜಿಯನ್ನು ಇಲಾಖಾ ವೆಬ್‌ಸೈಟ್ www.ewlfareofdisabled.kar.ni.c.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕೇರಾಫ್ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ.
- ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ದಾಖಲೆಗಳೊಂದಿಗೆ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕೇರಾಫ್ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸಬಹುದಾಗಿರುತ್ತದೆ.
- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ, ಎಲ್ಲಾ ದಾಖಲೆಗಳು ಸರಿ ಇದ್ದಲ್ಲಿ ಜೇಷ್ಠತೆಯ ಆಧಾರದ ಮೇಲೆ ಉಪಸಮಿತಿಯಲ್ಲಿ ಮಂಡಿಸಿ, ಮಂಜೂರಾತಿ ಪಡೆಯುವುದು.
- ಮಂಜೂರಾತಿ ಪಡೆದ ಹಿರಿಯ ನಾಗರಿಕರಿಗೆ ಸ್ಥಳೀಯ ಶಾಸಕರ ಸಮ್ಮುಖದಲ್ಲಿ ವಿತರಣೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

3/5/13
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

..3

5. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
6. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ, ಅಭಯ ಸಂಕೀರ್ಣ, 2ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು.
7. ಅಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(2&10), ವಿಧಾನ ಸೌಧ, ಬೆಂಗಳೂರು
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
12. ಶಾಖಾಧಿಕಾರಿ,. ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.

# ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗೆ ಸಾಧನ ಸಲಕರಣೆ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ

ಹಿರಿಯ ನಾಗರಿಕರ
ಇತ್ತೀಚಿನ
ಪಾಸ್‌ಪೋರ್ಟ್
ಅಳತೆಯ
ಭಾವಚಿತ್ರ

| | | |
|---|---|---|
| 1 | ಫಲಾನುಭವಿಯ ಹೆಸರು ಮತ್ತು ವಿಳಾಸ (ಆಧಾರದ ಕಾರ್ಡ್‌ನಲ್ಲಿ ನಮೂದಿಸಿರುವಂತೆ<br><br>ಮೊಬೈಲ್ ಸಂಖ್ಯೆ:<br>ಇ-ಮೇಲ್ ವಿಳಾಸ | |
| 2 | ವಯಸ್ಸು (ಪ್ರಮಾಣ ಪತ್ರದೊಂದಿಗೆ | |
| 3 | ಲಿಂಗ | |
| 4 | ಜಾತಿ (ಎಸ್.ಸಿ/ಎಸ್.ಟಿ/ಒಬಿಸಿ/ಸಾಮಾನ್ಯ) | |
| 5 | ಬಿ.ಪಿ.ಎಲ್ ಕಾರ್ಡ್ ಸಂಖ್ಯೆ | |
| 6 | ಫಲಾನುಭವಿಯ ತಂದೆ / ತಾಯಿ ಹೆಸರು | |
| 7 | ಆಧಾರ್ ಕಾರ್ಡ್ ಸಂಖ್ಯೆ | |
| 8 | ವಿಧಾನಸಭಾ ಕ್ಷೇತ್ರ | |
| 9 | ಬೇಕಾಗಿರುವ ಸಾಧನ ಸಲಕರಣೆಗಳು | |
| 10 | ಸರ್ಕಾರಿ / ಖಾಸಗಿ ಡಾಕ್ಟರ್‌ರವರಿಂದ ಸಾಧನ ಸಲಕರಣೆಗಳು ಪಡೆಯಲು ನೀಡುವ ಅವಶ್ಯಕತೆಯ ಪ್ರಮಾಣ ಪತ್ರ | |

ಮೇಲೆ ತಿಳಿಸಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ನಾನು ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ: ಹಿರಿಯ ನಾಗರಿಕರ ಸಹಿ

**ಹಿರಿಯ ನಾಗರಿಕರಿಗೆ ಅಗತ್ಯವಾದ ಸಾಧನ ಸಲಕರಣೆ ಬೇಕು ಎಂಬುದರ ಬಗ್ಗೆ ಸರ್ಕಾರಿ/ಖಾಸಗಿ ಡಾಕ್ಟರ್‌ರವರಿಂದ ಪಡೆಯಬಹುದಾದ ಅವಶ್ಯಕತೆಯ ಪ್ರಮಾಣ ಪತ್ರ**

ಶ್ರೀ.(ಆಧಾರ್ ಕಾರ್ಡ್‌ನಲ್ಲಿ ನಮೂದಿಸಿರುವ ಹೆಸರು ಮತ್ತು ವಿಳಾಸದಂತೆ) ____________________

______________________________________________

______________________________________________

ಇವರು ಹಿರಿಯ ನಾಗರಿಕರಿದ್ದು, ಇವರಿಗೆ ____________________________

______________________________________________

ಸಮಸ್ಯೆ/ಸಮಸ್ಯೆಗಳಿದ್ದು, ಇವರಿಗೆ ಸರ್ಕಾರದ ವತಿಯಿಂದ ಉಚಿತವಾಗಿ ನೀಡಲಾಗುವ

______________________________________________

____________________ ಸಾಧನ ಸಲಕರಣೆಗಳ ಅವಶ್ಯಕತೆ ಇರುತ್ತದೆಂದು ಶಿಫಾರಸ್ಸು ಮಾಡುತ್ತೇನೆ.

ಸ್ಥಳ:

ದಿನಾಂಕ:

**ಸಂಬಂಧಿಸಿದ ಕ್ಷೇತ್ರದಲ್ಲಿಯ ತಜ್ಞ ವೈದ್ಯರ ಸಹಿ ಹಾಗೂ ಮೊಹರು**